ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ,
ಕೊಪ್ಪ

**ಸಿ.ಸಿ.ನಂ. 447/2023**

ಸರ್ಕಾರದ ಪರವಾಗಿ : ಜಯಪುರ ಪೋಲೀಸರು

**ಆರೋಪಿ:** ರಮೇಶ ವೈ ಎಸ್., ಬಿನ್ ಸೋಮಯ್ಯ, 38 ವರ್ಷ, ಕೂಲಿ ಕೆಲಸ , ವಾಸ ಎಡೂರು ಗ್ರಾಮ, ಕಳಸ ತಾಲ್ಲೂಕು.

## ಆರೋಪಣೆ

ಜಯಪುರ ಪೊಲೀಸ್ ಠಾಣಾ ವ್ಯಾಪ್ತಿಯ ಜಯಪುರ ಪೊಲೀಸ್ ಠಾಣಾ ಮೊ.ಸಂ. 11/2023 ಕಲಂ 376 (1) ಐ.ಪಿ.ಸಿ ಮತ್ತು 4 ಪೋಕ್ಸೊ ಕಾಯ್ದೆ ಪ್ರಕರಣದಲ್ಲಿ ಆರೋಪಿಯಾದ ನಿಮ್ಮನ್ನು ದಿನಾಂಕ 23.02.2023 ರಂದು ರಾತ್ರಿ 23ಃ45 ಗಂಟೆಗೆ ಹೊರನಾಡು ಗ್ರಾಮದಲ್ಲಿ ವಶಕ್ಕೆ ತೆಗೆದುಕೊಂಡು ರಾತ್ರಿ 2.00 ಗಂಟೆಗೆ ಜಯಪುರ ಠಾಣೆಗೆ ಕರೆತಂದು ಸೂಕ್ತ ಭದ್ರಿಕೆಯಲ್ಲಿರಿಸಿದ್ದು, ಆರೋಪಿಯಾದ ನೀವು ದಿನಾಂಕ 24.02.2023 ರಂದು ಬೆಳಿಗ್ಗೆ 9.20 ಗಂಟೆ ಸಮಯದಲ್ಲಿ ಜಯಪುರ ಠಾಣೆಯಿಂದ ಕಾನೂನು ಬದ್ಧವಾಗಿ ದಸ್ತಗಿರಿಯಾಗುವುದಕ್ಕೆ ಅಡ್ಡಿಪಡಿಸಿ ಪಹರೆ ಕರ್ತವ್ಯದಲ್ಲಿದ್ದ ಚಾಸಾ.6 ಶ್ರೀ ಮಂಜುನಾಥ ಬರಿಗಾಲ, ಸಿಪಿಸಿ 508 ರವರ ಕಣ್ತಪ್ಪಿಸಿ ಜಯಪುರ ಠಾಣೆಯಿಂದ ಓಡಿ ಹೋಗಿ ಪೊಲೀಸ್ ಅಭಿರಕ್ಷೆಯಿಂದ ತಪ್ಪಿಸಿಕೊಂಡು ಭಾರತ ದಂಡ ಸಂಹಿತೆ ಕಲಂ **224 ರ** ಅಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಿರೆಂದು ಆರೋಪಣೆ ಹೊರಿಸಲಾಗಿದೆ.

ಮೇಲಿನ ಆರೋಪಣೆಯನ್ನು ಓದಿ ವಿವರಿಸಿದ್ದು ಅರ್ಥವಾಯಿತೇ?

ಅರ್ಥವಾಯಿತು

ಮೇಲಿನ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

ಒಪ್ಪಿಕೊಳ್ಳುವುದಿಲ್ಲ ವಿಚಾರಣೆಯಾಗಬೇಕು

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ವಿವರಿಸಿ, ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ.

13/8/2024

(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.